2174 (2290) ಶ್ರೀ ರಾಜೇಂದ್ರ ವರ್ಮ (ಹುಲಸೂರು): ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ ಮೂರು ವರ್ಷಗಳಲ್ಲಿ ಎಷ್ಟು ಭಾಗ್ಯಜ್ಯೋತಿ ಮತ್ತು ಕುಟೀರ ಜ್ಯೋತಿ ವಿದ್ಯುತ್ ಸಂಪರ್ಕ ಅಳವಡಿಸಲಾಗಿದೆ; (ವಿವರ ನೀಡುವುದು);

ಆ) ಸಂಪರ್ಕ ಅಳವಡಿಸಿದರೆ ಅವುಗಳಿಗೆ ಮೀಟರ್ ಕೂಡಿಸಲಾಗಿದೆಯೇ;

ಇ) ಭಾಗ್ಯಜ್ಯೋತಿ ಯೋಜನೆಗೆ ಮೀಟರ್ ಅಳವಡಿಸುವುದರಿಂದ ಬಡವರ ಮೇಲೆ ಹೊರೆ ಬೀಳುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಬಂದಿದ್ದರೆ ಈ ಮೀಟರ್‌ಗಳನ್ನು ತೆಗೆಯುವ ವಿಚಾರ ಸರ್ಕಾರಕ್ಕಿದೆಯೇ?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ಕಳೆದ ಮೂರು ವರ್ಷಗಳಲ್ಲಿ ಅಂದರೆ 2001–02, 2002–03 ಮತ್ತು 2003–04 ರಲ್ಲಿ 21,19,099 ಭಾಗ್ಯ ಜ್ಯೋತಿ/ಕುಟೀರ ಜ್ಯೋತಿ ಸ್ಥಾವರಗಳಿಗೆ ವಿದ್ಯುತ್ ಕಲ್ಪಿಸಲಾಗಿರುತ್ತದೆ. ವಿದ್ಯುತ್ ಸಂಪರ್ಕ ಕಲ್ಪಿಸಲಾಗಿರುವ ಭಾಗ್ಯ ಜ್ಯೋತಿ/ಕುಟೀರ ಜ್ಯೋತಿ ಸ್ಥಾವರಗಳ ವರ್ಷಾವಾರು ವಿವರಗಳು ಈ ಕೆಳಕಂಡಂತಿವೆ.

ಕ್ರ. ಸಂ.	ಅವಧಿ	ವಿದ್ಯುತ್ ಸಂಪರ್ಕ ನೀಡಲಾದ ಭಾಗ್ಯ ಜ್ಯೋತಿ/ಕುಟೀರ ಜ್ಯೋತಿ ಸ್ಥಾವರಗಳ ಸಂಖ್ಯೆ
1	2001–02	69,522
2	2002–03	1,12,039
3	2003–04	37,538
	ಒಟ್ಟು	**2,19,099**

ಆ) ಈ ಹಿಂದೆ ಭಾಗ್ಯ ಜ್ಯೋತಿ/ಕುಟೀರ ಜ್ಯೋತಿ ಸ್ಥಾವರಗಳಿಗೆ ಮೀಟರ್‌ಗಳನ್ನು ಅಳವಡಿಸದೇ ವಿದ್ಯುತ್ ಸಂಪರ್ಕವನ್ನು ನೀಡಲಾಗಿತ್ತು. ಈ ರೀತಿ ಮೀಟರ್‌ಗಳನ್ನು ಅಳವಡಿಸದೇ ವಿದ್ಯುತ್ ಸಂಪರ್ಕ ಕಲ್ಪಿಸಲಾಗಿರುವ ಎಲ್ಲಾ ಭಾಗ್ಯ ಜ್ಯೋತಿ / ಕುಟೀರ ಜ್ಯೋತಿ ಸ್ಥಾವರಗಳಿಗೆ "ಯೂನಿವರ್ಸಲ್ ಮೀಟರಿಂಗ್ ಕಾರ್ಯಕ್ರಮ" ದಡಿ ಮೀಟರುಗಳನ್ನು ಅಳವಡಿಸಲು ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿರುತ್ತದೆ. ಹೊಸ ಭಾಗ್ಯ ಜ್ಯೋತಿ / ಕುಟೀರ ಜ್ಯೋತಿ ಸ್ಥಾವರಗಳೀಗೆ ಮೀಟರುಗಳನ್ನು ಅಳವಡಿಸಿಯೇ ವಿದ್ಯುತ್ ಸಂಪರ್ಕವನ್ನು ಕಲ್ಪಿಸಲಾಗುತ್ತಿದೆ.

ಇ) ಭಾಗ್ಯ ಜ್ಯೋತಿ / ಕುಟೀರ ಜ್ಯೋತಿ ಯೋಜನೆಗಳಡಿಯಲ್ಲಿ ವಿದ್ಯುತ್ ಸಂಪರ್ಕ ಪಡೆದುಕೊಳ್ಳುವ ಬಡವರ ಮನೆಗಳಿಗೆ ವಿದ್ಯುತ್ ಮೀಟರುಗಳನ್ನು ಅಳವಡಿಸಲು, ಫಲಾನುಭವಿಗಳಿಂದ ಮೀಟರ್‌ಗೆ ತಗಲುವ ಹಣವನ್ನು ಭರಿಸಿಕೊಳ್ಳದೇ, ವಿದ್ಯುತ್ ಸರಬರಾಜು

ಕಂಪನಿಗೂ ತಮ್ಮ ಖರ್ಚಿನಲ್ಲಿಯೇ ವಿದ್ಯುತ್ ಮೀಟರ್‌ಗಳನ್ನು ಅಳವಡಿಸುತ್ತಿರುವುದರಿಂದ, ಇದು ಬಡವರಿಗೆ ಹೊರೆಯಾಗುವುದಿಲ್ಲ. ಅಲ್ಲದೇ, ಭಾಗ್ಯ ಜ್ಯೋತಿ / ಕುಟೀರ ಜ್ಯೋತಿ ಸ್ಥಾವರಗಳಿಗೆ ಮೀಟರ್‌ಗಳನ್ನು ಅಳವಡಿಸಿದರೂ ಸಹ ಪ್ರತಿ ತಿಂಗಳು 18 ಯೂನಿಟ್ಟುಗಳವರೆಗೆ ಉಚಿತ ವಿದ್ಯುತ್‌ನ್ನು ಒದಗಿಸಲು ಸರ್ಕಾರವು ಈಗ ಆದೇಶವನ್ನು ನೀಡಿರುತ್ತದೆ. ಆದುದರಿಂದ ಈ ಸೌಲಭ್ಯವನ್ನು ಪಡೆದುಕೊಳ್ಳಲು ಭಾಗ್ಯ ಜ್ಯೋತಿ / ಕುಟೀರ ಜ್ಯೋತಿ ಸಂಪರ್ಕಗಳಿಗೆ ವಿದ್ಯುತ್ ಮೀಟರ್‌ಗಳ ಅಳವಡಿಕೆಯು ಕಡ್ಡಾಯವಾಗಿರುತ್ತದೆ. ವಿದ್ಯುತ್ ಕ್ಷೇತ್ರದಲ್ಲಿನ ತಾಂತ್ರಿಕ ಮತ್ತು ವಾಣಿಜ್ಯ ನಷ್ಟವನ್ನು ಸ್ಪಷ್ಟವಾಗಿ ನಿರ್ಣಯಿಸಲು ಮಾಡಲಾಗುತ್ತಿರುವ 'ಎನರ್ಜಿ ಆಡಿಟ್' ವ್ಯವಸ್ಥೆಯನ್ನು ಕೈಗೊಳ್ಳಲು ಹಾಗೂ ರಿಯಾಯಿತಿ ದರದಲ್ಲಿ ವಿದ್ಯುತ್ ಸರಬರಾಜನ್ನು ಮಾಡಲಾಗುತ್ತಿರುವ ವಿದ್ಯುತ್ ಸ್ಥಾವರಗಳಿಗೆ ಸರ್ಕಾರದಿಂದ ನೀಡಲಾಗುತ್ತಿರುವ ಸಹಾಯ ಧನವನ್ನು ನಿರ್ದಿಷ್ಟವಾಗಿ ನಿಗದಿಪಡಿಸಲು ಪ್ರತಿಯೊಂದು ವಿದ್ಯುತ್ ಸ್ಥಾವರಕ್ಕೂ ಮೀಟರ್‌ನ್ನು ಅಳವಡಿಸುವುದು ಅವಶ್ಯಕವಾಗಿರುತ್ತದೆ. ಆದ್ದರಿಂದ, ಸರ್ಕಾರದ ನೀತಿಯಂತೆ ಭಾಗ್ಯ ಜ್ಯೋತಿ / ಕುಟೀರ ಜ್ಯೋತಿ ಸ್ಥಾವರಗಳೂ ಸೇರಿದಂತೆ ಮೀಟರ್ ರಹಿತ ವರ್ಗಗಳ ಎಲ್ಲಾ ವಿದ್ಯುತ್ ಸ್ಥಾವರಗಳಿಗೆ "ಯೂನಿವರ್ಸಲ್ ಮೀಟರಿಂಗ್ ಕಾರ್ಯಕ್ರಮ" ದಡಿ ಮೀಟರ್‌ಗಳನ್ನು ಅಳವಡಿಸಲು ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಮೀಟರ್‌ಗಳನ್ನು ತೆಗೆಯುವ ವಿಚಾರವು ಸರ್ಕಾರದ ಮುಂದೆ ಇರುವುದಿಲ್ಲ.

2175 (2291) ಶ್ರೀ ರಾಜೇಂದ್ರ ವರ್ಮ (ಹುಲಸೂರು): ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೀದರ್ ಜಿಲ್ಲೆಯ ರಸ್ತೆಗಳಲ್ಲಿ ಗುಂಡಿ ಬಿದ್ದಿರುವುದು ತಮ್ಮ ಗಮನಕ್ಕೆ ಬಂದಿದೆಯೇ;

ಆ) ಗುಂಡಿಗಳು ಬಿದ್ದಿರುವುದು ಸರ್ಕಾರದ ಗಮನಕ್ಕೆ ಬಂದಿದ್ದಲ್ಲಿ ಅವುಗಳನ್ನು ಮುಚ್ಚಲು ಅನುದಾನ ಒದಗಿಸಲಾಗಿದೆಯೇ;

ಇ) ಒದಗಿಸಿದರೆ ಹುಲಸೂರು ಕ್ಷೇತ್ರಕ್ಕೆ ಎಷ್ಟು ಅನುದಾನ ನೀಡಲಾಗಿದೆ;

ಈ) ಈ ಕಾಮಗಾರಿಯನ್ನು ಪ್ರಾರಂಭಿಸುವುದು ಯಾವಾಗ?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ಹೌದು

ಆ) ಬೀದರ್ ಜಿಲ್ಲೆಯಲ್ಲಿ ಒಟ್ಟು 1310 ಕಿಮೀ ಉದ್ದದ ರಾಜ್ಯ ಹೆದ್ದಾರಿ ಹಾಗೂ ಜಿಲ್ಲಾ ಮುಖ್ಯ ರಸ್ತೆಗಳಲ್ಲಿರುವ ಗುಂಡಿ ತುಂಬುವ ಕೆಲಸಗಳಿಗಾಗಿ ರೂ.204.00 ಲಕ್ಷಗಳ ಅನುದಾನ ಒದಗಿಸಲಾಗಿದೆ.

ಇ) ಹುಲಸೂರು ಕ್ಷೇತ್ರಗಳ ಬರುವ ರಾಜ್ಯ ಹೆದ್ದಾರಿ ಮತ್ತು ಜಿಲ್ಲಾ ಮುಖ್ಯ ರಸ್ತೆಗಳಲ್ಲಿನ ಗುಂಡಿ ಮುಚ್ಚಲು ಒಟ್ಟು ರೂ.34.00 ಲಕ್ಷಗಳ ಅನುದಾನ ಒದಗಿಸಲಾಗಿದೆ.